ಚಿಕ್ಕನಾಯಕನಹಳ್ಳಿ ಲೋಕೋಪಯೋಗಿ ರಸ್ತೆಗಳು

೯೫೮ (೧೬೪೬) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಚಿಕ್ಕನಾಯಕನಹಳ್ಳಿಯಿಂದ ಹಂದನಕೆರೆಗೆ ಮತ್ತು ಚಿಕ್ಕನಾಯಕನಹಳ್ಳಿಯಿಂದ ಹಾಗಲವಾಡಿಗೆ ಎರಡು ಲೋಕೋಪಯೋಗಿ ಇಲಾಖೆಯ ರಸ್ತೆಗಳು ಇರುವುದು ಸರ್ಕಾರದ ಗಮನದಲ್ಲಿದೆಯೇ ?

ಆ) ಇದ್ದಲ್ಲಿ ಇವು ವಾಹನಗಳ ಓಡಾಟಕ್ಕೆ ಯೋಗ್ಯವಾಗಿವೆಯೇ ?

ಇ) ಇಲ್ಲದಿದ್ದಲ್ಲಿ ಈ ರಸ್ತೆಗಳನ್ನು ಸಮರ್ಪಕ ಓಡಾಟಕ್ಕೆ ಅನುಕೂಲವಾಗುವಂತೆ ಮಾಡಲು ಸರ್ಕಾರ ಹಾಕಿರುವ ಕಾರ್ಯಕ್ರಮಗಳೇನು ?

ಈ) ಹಾಗಿದ್ದಲ್ಲಿ ಎಷ್ಟು ದಿನದ ಒಳಗೆ ಈ ರಸ್ತೆಗಳನ್ನ್ನೆ ದುರಸ್ಥಿ ಮಾಡಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ, ಚಿಕ್ಕನಾಯಕನಹಳ್ಳಿ–ಮತಿಘಟ್ಟ–ಹಂದನಕೆರೆ ಕಣಕಟ್ಟೆ ರಸ್ತೆ (೩೨ ೬೦ ಕಿ.ಮೀ) ಹಾಗೂ ಚಿಕ್ಕನಾಯಕನಹಳ್ಳಿ–ಹಾಗಲವಾಡಿ ರಸ್ತೆ (೩೫.೧೦ ಕಿ.ಮೀ) ಎಂಬ ಎರಡು ಲೋಕೋಪಯೋಗಿ ಇಲಾಖೆ ರಸ್ತೆಗಳು ಇವೆ.

ಆ) ಯೋಗ್ಯವಾಗಿದೆ.

ಇ) ರಸ್ತೆಗಳನ್ನು ಲಭ್ಯವಿರುವ ನಿರ್ವಹಣಾ ಅನುದಾನದಲ್ಲಿ ನಿರ್ವಹಣೆ ಮಾಡಲಾಗುತ್ತಿದೆ.

ಈ) ರಸ್ತೆಗಳನ್ನು ಲಭ್ಯವಿರುವ ನಿರ್ವಹಣಾ ಅನುದಾನದಲ್ಲಿ ನಿರ್ವಹಣೆ ಮಾಡಲಾಗುತ್ತಿದೆ.

ತಾರಕಾ ನಾಲಾ ಕೆಲಸಗಳಿಗೆ ಮತ್ತು ಇತರೆ ಕೆಲಸಗಳಿಗೆ ೧೯೯೦–೯೧ನೇ ಸಾಲಿಗೆ ಎಷ್ಟು ಹಣ ಬಿಡುಗಡೆ ಮಾಡುವ ಕುರಿತು

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ತಾರಕಾ ನಾಲಾ ಕೆಲಸಗಳಿಗೆ ಮತ್ತು ಇತರೇ ಕೆಲಸಗಳಿಗೆ ೧೯೯೦–೧೯೯೧ನೇ ಸಾಲಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ?

ಆ) ತಾರಕಾ ನಾಲಾ ಕೆಲಸಗಳನ್ನು ಮಾಡಲು ಹಣ ಬಿಡುಗಡೆ ಮಾಡಲು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಇ) ತಾರಕಾ ನಾಲಾ ಕೆಲಸಗಳನ್ನು ಯಾವಾಗ ಪೂರ್ತಿ ಮಾಡುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೯೯೦–೯೧ನೇ ಸಾಲಿನಲ್ಲಿ ಈ ಯೋಜನೆಗೆ ಯಾವ ಅನುದಾನವು ಇರುವುದಿಲ್ಲ.

ಆ) ಈ ಯೋಜನೆಯ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲು ಈ ಸಾಲಿನಲ್ಲಿ ಹಣ ಒದಗಿಸುವ ಪ್ರಸ್ತಾವ ಸರ್ಕಾರದ ಮುಂದಿದೆ.

ಇ) ಹಣದ ಲಭ್ಯತೆಯನ್ನು ಅವಲಂಬಿಸಿ ಈ ಯೋಜನೆಯನ್ನು ೧೯೯೧ರ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

ಕಬಿನಿ ಡ್ಯಾಂ ಬಳಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರಿಂದ ಕಾಟೆ ಜ್‌ಗಳನ್ನು ಸಾರ್ವಜನಿಕ ಮತ್ತು ಪ್ರವಾಸಿಗರ ಹಿತದೃಷ್ಟಿಯಿಂದ ಕಟ್ಟುವ ಬಗ್ಗೆ

೯೬೦ (೧೬೫೪) ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಮಾನ್ಯ ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಬಿನಿ ಡ್ಯಾಮ್ ಬಳಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರಿಂದ ಎಕಾಟೇಜ್‌ಗಳನ್ನ ಮತ್ತು ಪ್ರವಾಸಿಗರ ಸಾರ್ವಜನಿಕರ ಹಿತ ದೃಷ್ಟಿಯಿಂದ ಕಟ್ಟಲು ಏಕೆ ಉದ್ದೇಶಿಸಿಲ್ಲ?

ಆ) ದರಿಂದ ಪ್ರವಾಸಿಗರಿಗೆ ಅನುಕೂಲವಾಗಿ ಸರ್ಕಾರಕ್ಕೆ ಲಾಭವಾಗುವುದಿಲ್ಲವೇ ?

ಇ) ಕೂಡಲೇ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರದವರ ನಿಲುವು ಏನು ?

ಶ್ರೀ ಎಂ. ವೀರಪ್ಪಮೊಯಿಲಿ (ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು).—

ಅ) ನಿಗಮದ ಹಣಕಾಸಿನ ಪರಿಸ್ಥಿತಿಯನ್ನು ಮತ್ತು ಪ್ರವಾಸಿ ಅಭಿವೃದ್ಧಿ ಸ್ಥಳಗಳ ಲಾಭದಾಯಕತೆಯನ್ನು ಪರಿಗಣಿಸಿ ನಿಗಮದವರು ಕ್ರಮ ತೆಗೆದುಕೊಳ್ಳುವರು.

ಆ) ಪರಿಶೀಲಿಸಲಾಗುವುದು.

ಇ) ಕ್ರಮ ತೆಗೆದುಕೊಳ್ಳುವ ಸಾಧ್ಯಾಸಾಧ್ಯತೆ ಕೂಲಂಕುಷವಾಗಿ ಪರಿಶೀಲಿಸಲಾಗುವುದು.

ಮೈಸೂರು ಊಟಿ ಹೆದ್ದಾರಿಯನ್ನು ಜೋಡಿ ರಸ್ತೆಯನ್ನಾಗಿ ನಿರ್ಮಿಸುವುದು

೯೬೨. (೧೬೬೪) ಶ್ರೀ ಎಂ. ಮಹಾದೇವ್ (ನಂಜನಗೂಡು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮೈಸೂರು ಊಟಿ ಹೆದ್ದಾರಿಯಲ್ಲಿರುವ ನಂಜನಗೂಡು ಕಪಿಲಾನದಿಯ ಟೋಲ್‌ಗೇಟ್ ನಿಂದ ಕಾರ್ಮಲ್ ಕಾನ್ವೆಂಟ್ ಹತ್ತಿರವಿರುವ ಪುರಸಭೆ ಟೋಲ್‌ಗೇಟ್ ಹೆದ್ದಾರಿಯ ರಸ್ತೆಯಲ್ಲಿ ಅಧಿಕ ಒತ್ತಡದ ವಾಹನ ಸಂಚಾರವಿರುವುದು ನಿಜವೆ ?

ಆ) ಈ ರಸ್ತೆಯು ಕಿರಿದಾಗಿರುವುದರಿಂದ ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಈ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ನಿರ್ಮಿಸುವ ಆಲೋಚನೆ ಸರ್ಕಾರಕ್ಕಿದೆಯೆ, ಹಾಗಿದ್ದಲ್ಲಿ ಯಾವಾಗ ಈ ನಿರ್ಮಾಣವನ್ನು ಕೈಗೊಳ್ಳಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ನಿಜ

ಆ) ಪ್ರಾಂತಿಯ ಹೆದ್ದಾರಿಗೆ ಇರಬೇಕಾದಷ್ಟು ೭ ಮೀಟರ್ ಅಗಲವಿದೆ. ಈ ಭಾಗದ ರಸ್ತೆಯಲ್ಲಿ ಅಧಿಕ ವಾಹನ ಸಂಚಾರದ ಒತ್ತಡದಿಂದ ಅಪಘಾತಗಳು ಸಂಭವಿಸುತ್ತಿವೆ.

ಇ) ಈ ರಸ್ತೆಯ ಭಾಗವನ್ನು ಸುಮಾರು ೫೦ ಲಕ್ಷ ರೂ. ಗಳ ಅಂದಾಜಿನಲ್ಲಿ ಜೋಡಿ ರಸ್ತೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿವೆ. ಪ್ರಸ್ತಾವನೆಯನ್ನು ಅನುಮೋದಿಸಿದ ನಂತರವೇ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಬಂಟ್ವಾಳ ತಾಲ್ಲೂಕಿನ ನೀರಾವರಿ ಯೋಜನೆಗಳು

೯೬೩. (೧೬೧೬) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ನೀರಾವರಿ ಮತ್ತು ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಮುನ್ನೂರು ಏತ ನೀರಾವರಿ ಯೋಜನೆಯಲ್ಲಿ ಎಷ್ಟು ಎಕರೆ ಕೃಷಿ ಭೂಮಿಗೆ ಪ್ರಯೋಜನವಾಗಬೇಕಾಗಿತ್ತು ?

ಆ) ಈಗ ಎಷ್ಟು ಭೂಮಿಗೆ ನೀರು ಒದಗಿಸಲಾಗುತ್ತಿದೆ ?

ಇ) ಹೀಗಾಗಲು ಕಾರಣಗಳೇನು ?